# ರಾಮಕೃಷ್ಣ ಮಹಾಸಂಘದ ಉಗಮ – ಒಂದು ರೋಮಾಂಚಕ ಕತೆ

(ಹಿಂದಿನ ಸಂಚಿಕೆಯಿಂದ)

## ದಿವ್ಯನಾಯಕನ ಸಂದೇಶ ಮತ್ತು ಸಂಘಟನೆ

**ಸ್ವಾ**ಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಲ್ಲಿ ನಾಲ್ಕು ವರ್ಷಗಳ ಕಾಲ ಇದ್ದರು. ನಂತರ ೧೮೯೭ ರಲ್ಲಿ ಭಾರತಕ್ಕೆ ಹಿಂತಿರುಗಿದರು. ಈ ಜನಮಾನಸದ ಪ್ರಜ್ಞೆಯ ಉದ್ಧಾರಕನ ಆಗಮನದಿಂದ ಭಾರತೀಯರಲ್ಲಿ ಹೊಸ ಚೇತನ ಮೂಡಿತು. ಕೊಲಂಬೋದಿಂದ ಆಲ್ಮೋರಾದವರೆಗೆ ಮಾಡಿದ ಅವರ ಪ್ರವಚನಗಳು ಭಾರತೀಯರಲ್ಲಿ ತಮ್ಮ ಸಂಸ್ಕೃತಿ ಮತ್ತು ಧರ್ಮಗಳ ಬಗ್ಗೆ ಹೆಮ್ಮೆ ಮತ್ತು ಗೌರವವನ್ನು ಮೂಡಿಸುವಂತೆ ಮಾಡಿತು. ಸ್ವಾಮೀಜಿ ತಮ್ಮ ಭಾಷಣಗಳಲ್ಲಿ ಭಾರತದ ಪುನರುದ್ಧಾರಕ್ಕಾಗಿ ಧರ್ಮ ಮತ್ತು ಶಿಕ್ಷಣಗಳು ಜನಸಾಮಾನ್ಯರನ್ನೂ ತಲುಪಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಅದಕ್ಕಾಗಿ ಭಾರತೀಯ ಯುವಕರು 'ತ್ಯಾಗ' ಮತ್ತು 'ಸೇವೆ' ಗಳೆಂಬ ಅವಳಿ ಆದರ್ಶವನ್ನು ಕೈಗೊಳ್ಳಬೇಕೆಂದು ಕರೆಕೊಟ್ಟರು.

ಉನ್ನತ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆತ್ಮೋದ್ಧಾರಕ್ಕಾಗಿ ಮತ್ತು ಜಗತ್ತಿನ ಹಿತಕ್ಕಾಗಿ ದುಡಿಯುವ ಯುವ ಸಂನ್ಯಾಸಿಗಳ ಪಡೆಯೊಂದನ್ನು ನಿರ್ಮಾಣ ಮಾಡುವುದು ಸ್ವಾಮಿ ವಿವೇಕಾನಂದರ ಕನಸಾಗಿತ್ತು. ಅವರು ಒಂದು ಕಡೆ ಬರೆಯುತ್ತಾರೆ: "ತನ್ನ ಮೋಕ್ಷಕ್ಕಾಗಿ ಮಾತ್ರವೇ ಪ್ರಯತ್ನಪಡುವವನು ಶ್ರೀರಾಮಕೃಷ್ಣರ ಅನುಯಾಯಿಯಾಗಲು ಯೋಗ್ಯನಲ್ಲ." ಸ್ವಾಮೀಜಿಯವರ ಸಂನ್ಯಾಸದ ಆದರ್ಶ, ಸ್ವಂತ ಮುಕ್ತಿಗಾಗಿ ವ್ರತಧಾರಣ ಮಾಡುವುದಕ್ಕಾಗಿ ಮಾತ್ರ ಸೀಮಿತವಾಗಿರಲಿಲ್ಲ. ಅದು ಬಡಜನರ, ರೋಗಿಗಳ, ಹಸಿವೆಯಿಂದ ನರಳುತ್ತಿರುವವರ ಮತ್ತು ಅಜ್ಞಾನಿಗಳ ಸೇವಾವ್ರತ ಧಾರಣೆಯೂ ಆಗಿತ್ತು. ಇದೇ ಇಂದಿಗೂ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳ ಜೀವನವ್ರತವಾಗಿದೆ.

ಈ ಧ್ಯೇಯಗಳನ್ನು ಪ್ರಸಾರ ಮಾಡುವುದಕ್ಕೆ ದೇಶದ ಹಲವಾರು ಕಡೆ ಕೇಂದ್ರಗಳನ್ನು ಪ್ರಾರಂಭಿಸಬೇಕೆಂಬುದು ಸ್ವಾಮಿ ವಿವೇಕಾನಂದರ ಇಚ್ಛೆಯಾಗಿತ್ತು. ಅದನ್ನು ಪೂರೈಸಲೆಂದೇ ಸ್ವಾಮಿ ರಾಮಕೃಷ್ಣಾನಂದರು ಮದ್ರಾಸಿಗೆ ತೆರಳಿದರು; ಸ್ವಾಮಿ ಶಿವಾನಂದರು ವಾರಾಣಸಿಗೆ ಹೋದರು. ಇದಲ್ಲದೆ ಮತ್ತೆ ಕೆಲವು ಸ್ಥಳಗಳಲ್ಲಿಯೂ ಮಠದ ಕೇಂದ್ರಗಳು ಆರಂಭಗೊಂಡವು. ಇವೆಲ್ಲವೂ ರಾಮಕೃಷ್ಣ ಆಂದೋಲನದ ಕಾರ್ಯಮಂದಿರಗಳಾಗಿ ಬೆಳಗಿದವು.

## ರಾಮಕೃಷ್ಣ ಮಿಷನ್ನಿನ ಆರಂಭ

ಮೇ ೧, ೧೮೯೭ – ರಾಮಕೃಷ್ಣ ಆಂದೋಲನದ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಬರೆದಿಡಬೇಕಾದ ದಿನ. ಅಂದು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಮತ್ತು ಗೃಹಸ್ಥ ಭಕ್ತರು ಭಕ್ತ ಬಲರಾಮ ಬಸುವಿನ ಮನೆಯಲ್ಲಿ ಸೇರಿದರು. ಈ ಸಭೆಯ ಫಲಶ್ರುತಿಯಾಗಿ "ರಾಮಕೃಷ್ಣ ಮಿಷನ್" ಸ್ಥಾಪನೆಯಾಯಿತು.



ಬಲರಾಮ ಮಂದಿರ

ಇದರ ಧ್ಯೇಯೋದ್ದೇಶಗಳನ್ನು ಸ್ವಾಮಿ ವಿವೇಕಾನಂದರು ಹೀಗೆ ವಿವರಿಸುತ್ತಾರೆ: "ನಾವು ಯಾರ ಹೆಸರಿನಲ್ಲಿ ಸಂನ್ಯಾಸ ಸ್ವೀಕಾರ ಮಾಡಿರುವೆವೋ ಅವರ ಹೆಸರಿನಲ್ಲಿಯೆ ಸಂಘ ಸ್ಥಾಪನೆ ಆಗಬೇಕು. ಯಾರ ಜೀವನಾದರ್ಶವು ಜಗತ್ತಿನ ಕಾರ್ಯಕ್ಷೇತ್ರದಲ್ಲಿ ಪ್ರವೇಶಿಸಿದೆಯೋ, ದೇಹಾವಸಾನದ ನಂತರ ಕೇವಲ ಇಪ್ಪತ್ತು ವರ್ಷಗಳಲ್ಲಿ ಯಾರ ಪಾವನ ನಾಮವು ಪೂರ್ವ ಪಶ್ಚಿಮಗಳಲ್ಲಿ ಹಬ್ಬಿದೆಯೋ, ಆ ಮಹಾಪುರುಷರ ಹೆಸರೇ ಈ ಸಂಘಕ್ಕೆ ಇರಲಿ. ನಾವೆಲ್ಲ ಆ ಪ್ರಭುವಿನ ದಾಸರು. ಈ ಕಾರ್ಯದಲ್ಲಿ ನೀವೆಲ್ಲ ನಮಗೆ ನೆರವಾಗುವಿರೆಂದು ನಂಬಿದ್ದೇವೆ." ಶ್ರೀ ಗಿರೀಶ್ ಘೋಷ್ ಮುಂತಾದ ಗೃಹೀಭಕ್ತರೆಲ್ಲರೂ ಸ್ವಾಮೀಜಿಯವರ ಈ ಹೇಳಿಕೆಯನ್ನು ಮನಃಪೂರ್ವಕವಾಗಿ ಅನುಮೋದಿಸಿದರು. ಸಂಘಕ್ಕೆ 'ರಾಮಕೃಷ್ಣ ಮಿಷನ್' ಎಂದು ಹೆಸರಿಡಲಾಯಿತು.

ರಾಮಕೃಷ್ಣ ಮಿಷನ್ನಿನ ಸೇವಾಕಾರ್ಯಗಳು ಅನೇಕ ಕಡೆ ಆರಂಭವಾದವು. ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರಾದ ಸ್ವಾಮಿ

ಅಖಂಡಾನಂದರು ಬಂಗಾಳದ ಮುರ್ಷಿದಾಬಾದಿನಲ್ಲಿಯೂ, ಸ್ವಾಮಿ ತ್ರಿಗುಣಾತೀತಾನಂದರು ದಿನಾಜ ಪುರದಲ್ಲಿಯೂ ಬರ ಪರಿಹಾರ ಕೇಂದ್ರಗಳನ್ನು ತೆರೆದರು. ಕೊಲ್ಕತ್ತೆಯಲ್ಲಿ ಸೋದರಿ ನಿವೇದಿತೆ ಪ್ಲೇಗ್ ಪರಿಹಾರ ಕಾರ್ಯವನ್ನು ಆರಂಭಿಸಿದರು. ಹೀಗೆ ಪ್ರಕೃತಿ ವಿಕೋಪಗಳ ಸಮಯದಲ್ಲಿ ಸಂತ್ರಸ್ತರಿಗೆ ಪರಿಹಾರ ನೀಡುವ ಕಾರ್ಯವು ರಾಮಕೃಷ್ಣ ಮಹಾಸಂಘದ ಅವಿಭಾಜ್ಯ ಅಂಗವಾಗಿ ಪರಿಣಮಿಸಿತು. ಈ ಪುಣ್ಯ ಪರಂಪರೆ ಇಂದಿಗೂ ಅವಿಚ್ಛಿನ್ನವಾಗಿ ಮುಂದುವರಿಯತ್ತಿದೆ.



ಬೇಲೂರು ಮಠ – ಆರಂಭದ ದಿನಗಳಲ್ಲಿ

ಇದೇ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: **"**ನನ್ನ ಹುಡುಗರು ತೀವ್ರ ಅನಾವೃಷ್ಟಿ, ವ್ಯಾಧಿ ಮತ್ತು ಜನತೆಯ ಕಾರ್ಪಣ್ಯಗಳ ಮಧ್ಯದಲ್ಲಿ ಕೆಲಸಮಾಡುತ್ತಿದ್ದಾರೆ ಎಂದು ನಿನಗೆ ತಿಳಿಸಲು ಹೃದಯ ತುಂಬಿಬರುತ್ತಿದೆ... ನನ್ನ ಕಾರ್ಯಭಾರ ಈಗ ಸಂಪನ್ನಗೊಂಡಿತೆಂದು ನಾನು ಭಾವಿಸುತ್ತೇನೆ.**"**

## ಬೇಲೂರಿನ ಭಾಗ್ಯ

೧೮೯೮ ರ, ಫೆಬ್ರವರಿ ೧೩ ರಂದು ಮಠವನ್ನು ಗಂಗಾನದಿಯ ತಟದಲ್ಲಿರುವ ನೀಲಾಂಬರ ಮುಖರ್ಜಿ ಎಂಬುವವರ ತೋಟದ ಮನೆಗೆ ಸ್ಥಳಾಂತರಗೊಳಿಸಲಾಯಿತು. ಅದಕ್ಕೆ ಹತ್ತಿರದಲ್ಲಿಯೆ ಬೇಲೂರು ಗ್ರಾಮದಲ್ಲಿ, ಗಂಗಾತೀರದಲ್ಲಿ ಏಳು ಎಕರೆ ಭೂಮಿಯನ್ನು ಕೊಂಡುಕೊಳ್ಳಲಾಯಿತು. ಅದಕ್ಕೆ ಬೇಕಾದ ಧನಸಹಾಯ ಶ್ರೀಮತಿ ಮುಲ್ಲರ್ ಎಂಬ ಪಾಶ್ಚಾತ್ಯ ಭಕ್ತೆಯಿಂದ ಒದಗಿ ಬಂದಿತು.

೧೮೯೮ ರ ಫೆಬ್ರವರಿ ೨೭ ರಂದು ಸ್ವಾಮಿ ವಿವೇಕಾನಂದರು **"**ಆತ್ಮಾರಾಮ**"** ಎಂದು ಕರೆಯಲಾಗುವ ಶ್ರೀರಾಮಕೃಷ್ಣರ ಅಸ್ಥಿಯುಳ್ಳ ಕರಂಡಕವನ್ನು ತಾವೇ ಸ್ವತಃ ತಲೆಯಲ್ಲಿ ಹೊತ್ತು ತಂದು ಹೊಸ ಜಾಗಕ್ಕೆ ನಡೆದು ಬಂದರು. ಅಲ್ಲಿ ಅದಕ್ಕೆ ಪೂಜೆಯನ್ನು ಮಾಡಿ, ಹೋಮವನ್ನು ನೆರವೇರಿಸಲಾಯಿತು. ಕಾಲಕ್ರಮೇಣ ಅಲ್ಲಿ ಕಟ್ಟಡಗಳು ತಲೆ ಎತ್ತಿದವು. ೧೯೩೮ ರಲ್ಲಿ ಸ್ವಾಮಿ ವಿವೇಕಾನಂದರ ಆಶಯದ ಮೇರೆಗೆ ಇಲ್ಲಿ ಶ್ರೀರಾಮಕೃಷ್ಣರಿಗೆ ನಿವೇದಿತವಾದ ಬೃಹದ್ ದೇವಮಂದಿರವೊಂದು ನಿರ್ಮಾಣವಾಯಿತು. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಹಾಸಂಘದ ಮುಖ್ಯ ಕೇಂದ್ರವಾದ ಬೇಲೂರು ಮಠವನ್ನು ಕುರಿತು ಹೀಗೆ ಭವಿಷ್ಯವನ್ನು ನುಡಿದಿದ್ದಾರೆ: **"**ಇಲ್ಲಿಂದ ಹೊರಹೊಮ್ಮುವ ಆಧ್ಯಾತ್ಮಿಕ ಶಕ್ತಿಯ ಪ್ರವಾಹವು ಜಗತ್ತನ್ನೇ ತುಂಬಿಬಿಡುತ್ತದೆ.**"**

## ಶ್ರೀರಾಮಕೃಷ್ಣರ ಪ್ರೇಮಶರೀರ

ರಾಮಕೃಷ್ಣ ಮಹಾಸಂಘವನ್ನು ಶ್ರೀರಾಮಕೃಷ್ಣರ ಭೌತಿಕ ಶರೀರವೆಂದೇ ಸ್ವಾಮಿ ವಿವೇಕಾನಂದರು ಬಣ್ಣಿಸುತ್ತಾರೆ. ಸಂಘದ ದ್ವಿತೀಯ ಅಧ್ಯಕ್ಷರಾಗಿದ್ದ ಸ್ವಾಮಿ ಶಿವಾನಂದಜಿ ಹೇಳುತ್ತಾರೆ: **"ಪ್ರೇಮ, ಉದಾರತೆ, ಪವಿತ್ರತೆ ಮತ್ತು ನಿಸ್ವಾರ್ಥತೆಗಳೇ ನಮ್ಮ ಸಂಘದ ಆಧಾರಸ್ತಂಭಗಳು."**

ಆತ್ಮೋದ್ಧಾರ ಮತ್ತು ಜಗತ್ತಿನ ಹಿತಗಳೇ ಎರಡು ರೆಕ್ಕೆಗಳಾಗಿರುವ ರಾಮಕೃಷ್ಣ ಮಹಾಸಂಘವೆಂಬ ಪುಣ್ಯಪಕ್ಷಿ ಶ್ರೀರಾಮಕೃಷ್ಣರ ಪ್ರೇಮಸಂದೇಶವನ್ನು ಹೊತ್ತು ನಾಲ್ಕು ದಿಕ್ಕುಗಳಲ್ಲಿಯೂ ಪ್ರಪಂಚದುದ್ದಕ್ಕೂ ತನ್ನ ಪ್ರಭಾವವನ್ನು ಬೀರುತ್ತಿದೆ. ಇದರಿಂದ ಲಕ್ಷಗಟ್ಟಲೆ ಜನ ತಮ್ಮ ಜೀವನದಲ್ಲಿ ಸಾಂತ್ವನವನ್ನು ಪಡೆದುಕೊಂಡಿದ್ದಾರೆ, ಇಂದಿಗೂ ಪಡೆದುಕೊಳ್ಳುತ್ತಿದ್ದಾರೆ.

### ಆಶ್ರಮದ ಕಾರ್ಯಕ್ರಮಗಳು

ಜುಲೈ 2009

| | | |
|---|---|---|
| **3** | **ಶುಕ್ರವಾರ** | **ಏಕಾದಶಿ** |
| **7** | **ಮಂಗಳವಾರ** | **ಗುರುಪೂರ್ಣಿಮಾ** |
| **18** | **ಶನಿವಾರ** | **ಏಕಾದಶಿ** |
| **20** | **ಸೋಮವಾರ** | **ಸ್ವಾಮಿ ರಾಮಕೃಷ್ಣಾನಂದ ಜಯಂತಿ** |

ಪ್ರತಿ ಶನಿವಾರ ಇಂಗ್ಲಿಷ್‌ನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6 ಗಂಟೆಯಿಂದ 7 ರವರಗೆ ಪ್ರವಚನಗಳು ಇರುತ್ತವೆ.